# ಸಾಮಾಜಿಕ ಚಟುವಟಿಕೆಗಳಿಗೆ ಹೊಸ ಆವರಣ

**ಸಾಮಾಜಿಕ ಜಾಲತಾಣಗಳಿಂದ ನಕಲಿ ಸುದ್ದಿಯನ್ನು ಹೊರಗಿಡುವುದು ಕಷ್ಟ. ದೊಡ್ಡ ದೊಡ್ಡ ಮನುಷ್ಯರೇ ಸುಳ್ಳಿನ ಮೊರೆ ಹೋದಾಗ ಅದು ಇನ್ನೂ ಕಷ್ಟ.**



■ **ರವಿಕೃಷ್ಣಾ ರೆಡ್ಡಿ**
ಕರ್ನಾಟಕ ರಾಷ್ಟ್ರ ಸಮಿತಿ ಸಂಚಾಲಕ

ಸಾಮಾಜಿಕ ಜಾಲತಾಣಗಳು ನನ್ನ ಸಾಮಾಜಿಕ ಚಟುವಟಿಕೆಗಳಿಗೆ ಹೊಸ ಆವರಣವನ್ನು ಒದಗಿಸಿವೆ ಎಂದು ಹೇಳಲು ಇಷ್ಟಪಡುತ್ತೇನೆ. ಸಾಮಾಜಿಕ ಕಳಕಳಿಯಿಂದ ಹಾಕುವ ಪೋಸ್ಟ್‌ಗಳಿಗೆ ಸಮಾನ ಮನಸ್ಕರು ನೀಡುವ ಪ್ರತಿಕ್ರಿಯೆಗಳು ಒಂದೆಡೆಯಾದರೆ, ನಿರ್ದಿಷ್ಟ ಸಮಸ್ಯೆ ಇಟ್ಟುಕೊಂಡು ಮಾಡುವ ಕೆಲಸಗಳಿಗೆ ಸಿಗುವ ಸ್ಪಂದನೆಯೂ ಅಷ್ಟೆ ದೊಡ್ಡ ಪ್ರಮಾಣದಲ್ಲಿರುವುದು ವಿಶೇಷ.

ಮಾಡಿದ ಅಷ್ಟೂ ಫೇಸ್‌ಬುಕ್ ಲೈವ್‌ಗಳು ಕೇವಲ ಪ್ರತಿಕ್ರಿಯೆ ಪಡೆಯುವುದಕ್ಕಷ್ಟೆ ಮೀಸಲಾಗಿಲ್ಲ. ಇನ್ನಷ್ಟು ಸಮಸ್ಯೆಗಳನ್ನು ಹೆಕ್ಕಿ, ಅದರ ವಿರುದ್ಧ ಹೋರಾಡಲು ಬೇಕಿರುವ ಸಾಂಘಿಕ ಪ್ರಯತ್ನಕ್ಕೂ ಒಂದು ವೇದಿಕೆಯನ್ನು ಒದಗಿಸಿರುವುದು ಸುಳ್ಳಲ್ಲ.

ಹತ್ತು ವರ್ಷಗಳಿಂದ ಫೇಸ್‌ಬುಕ್ ಅನ್ನು ಬಳಸ್ತಾ ಇದ್ದೀನಿ. ಇದರ ಮೂಲಕವೇ ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡ್ತಾ ಇದ್ದೀನಿ. ಲಕ್ಷಾಂತರ ಜನರು ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಿರುವುದರಿಂದ ವಿಚಾರಗಳನ್ನು ಪಸರಿಸಲು ಸುಲಭ ಮಾಧ್ಯಮ ಸಿಕ್ಕಿದಂತಾಗಿದೆ.



ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳಿಗಷ್ಟೆ ಮಿತಿ ಹಾಕಿಕೊಳ್ಳದೇ ಸಾಹಿತ್ಯಿಕ, ಸಾಂಸ್ಕೃತಿಕ ಸಂವೇದನೆಯನ್ನು ಹುಟ್ಟುಹಾಕುವ ಕೆಲಸ ಮಾಡುತ್ತಿದ್ದೇನೆ. ಓದಿದ ಪುಸ್ತಕಗಳು, ಚಾರಿತ್ರಿಕ ಹಿನ್ನೆಲೆ ಇರುವ ಪ್ರದೇಶಗಳ ಬಗ್ಗೆ ಲೈವ್ ಮಾಡಿ ಮಾಹಿತಿ ನೀಡುವ ಕೆಲಸ ಮಾಡಿದ್ದೇನೆ.

ಎರಡೂವರೆ ವರ್ಷದ ಹಿಂದೆ ಚುನಾವಣೆ ನಿಂತ ಸಂದರ್ಭದಲ್ಲಿ ಜಯನಗರ ವ್ಯಾಪ್ತಿಯಲ್ಲಿ ಪಡಿತರ ವಿತರಣೆಯಲ್ಲಿ ಅವ್ಯವಹಾರ ನಡೆಯುತ್ತಿತ್ತು. ಅಧಿಕಾರಿಗಳನ್ನು ಕರೆಸಿ, ಫೇಸ್ ಬುಕ್ ಲೈವ್ ಮಾಡಿದ್ದೆವು. ಇದನ್ನು 26 ಲಕ್ಷ ಜನ ವೀಕ್ಷಣೆ ಮಾಡಿದ್ದಾರೆ. ಪಡಿತರ ಅಂಗಡಿಗಳಲ್ಲಿ ಉಚಿತವಾಗಿ ಸಿಗುವ ದವಸ, ಧಾನ್ಯವನ್ನು ದುಡ್ಡು ಕೊಟ್ಟು ಪಡೆಯುವ ಅವ್ಯವಸ್ಥೆ ಇತ್ತು. ಈ ಬಗ್ಗೆ ಲೈವ್‌ನಲ್ಲಿಯೇ ಅಧಿಕಾರಿಗಳಿಗೆ ಪ್ರಶ್ನೆ ಮಾಡಿದ್ದೆವು. ಪಡಿತರ ವಿತರಣೆ ಬಗ್ಗೆ ರಾಜ್ಯದಾದ್ಯಂತ ಜನರಲ್ಲಿ ವ್ಯಾಪಕ ಅರಿವು ಮೂಡಿಸುವಲ್ಲಿ ಈ ಲೈವ್ ದೊಡ್ಡ ಮಟ್ಟದ ನೆರವಾಯಿತು ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಲ್ಲೆ.

ಇಂದಿಗೂ 'ಸಕಾಲ', 'ಮಾಹಿತಿ ಹಕ್ಕು ಕಾಯ್ದೆ' ಕುರಿತು ಆಗಾಗ್ಗೆ ಲೈವ್ ನಡೆಸುತ್ತೇನೆ. ಇನ್ನೂ ಲಂಚಮುಕ್ತ ಅಭಿಯಾನದ ಭಾಗವಾಗಿ ಶಿರಾದಲ್ಲಿ ತಹಶೀಲ್ದಾರ್ ಕಚೇರಿಯಲ್ಲಿ ಒಂದು ಲೈವ್ ನಡೆಸಿದ್ದೆವು. ಬಡ ಹೆಣ್ಣುಮಗಳು ವಿಧವಾ ವೇತನಕ್ಕಾಗಿ ಆರು ತಿಂಗಳಿಂದ ಅಲೆದಾಡಿದ್ದರೂ ಪ್ರತಿಕ್ರಿಯೆ ನೀಡಬೇಕಾಗಿದ್ದ ಸರ್ಕಾರಿ ಅಧಿಕಾರದಲ್ಲಿದ್ದ ಹೆಣ್ಣುಮಗಳ ಮನಸ್ಸು ಕರಗಲಿಲ್ಲ. ಕರ್ತವ್ಯ ಮರೆತ ಹೆಣ್ಣುಮಗಳನ್ನು ಎಚ್ಚರಿಸುವ ಕೆಲಸ ಆ ಲೈವ್‌ನಿಂದ ಆಯಿತು.

ಉತ್ತರ ಭಾರತದಾದ್ಯಂತ ಪ್ರವಾಸ, ಶಿಕಾರಿಪುರದ ಈಸೂರು, ಚೈನ್ನೈನ ಗುಹೆಗಳು, ವಾಘಾ ಗಡಿ ಹೀಗೆ ಹಲವು ಚಾರಿತ್ರಿಕ ಹಿನ್ನೆಲೆ ಇರುವ ಪ್ರದೇಶಗಳ ಬಗ್ಗೆ ಲೈವ್ ಮಾಡಿದ್ದೇನೆ. 10 ದಿನಗಳ ಕಾಲ ಪುಸ್ತಕಗಳ ಬಗ್ಗೆಯೂ ಅಭಿಯಾನ ನಡೆಸಲಾಗಿತ್ತು.

ಸಾಮಾಜಿಕ ಜಾಲತಾಣಗಳಿಂದ ನಕಲಿ ಸುದ್ದಿಯನ್ನು ಹೊರಗಿಡುವುದು ಕಷ್ಟ. ದೊಡ್ಡ ದೊಡ್ಡ ಮನುಷ್ಯರೇ ಸುಳ್ಳಿನ ಮೊರೆ ಹೋದಾಗ ಅದು ಇನ್ನೂ ಕಷ್ಟ. ಮೊದಲೆಲ್ಲ ಪತ್ರಿಕೆ ಹಾಗೂ ಪುಸ್ತಕದಲ್ಲಿ ಬಂದಿದ್ದೆಲ್ಲವೂ ಸತ್ಯ ಎಂದು ನಂಬಲಾಗುತ್ತಿತ್ತು. ಕ್ರಮೇಣ ಈ ಮನಃಸ್ಥಿತಿ ಬದಲಾಗಿದೆ. ಹಾಗೆಯೇ ಸಾಮಾಜಿಕ ಜಾಲತಾಣಗಳಲ್ಲಿ ಬರುವುದೆಲ್ಲವೂ ಸತ್ಯವಲ್ಲ. ಅದನ್ನು ಮತ್ತೊಮ್ಮೆ ಪುನರ್ ಪರಿಶೀಲಿಸುವ ಮನಃಸ್ಥಿತಿಯೊಂದು ಬೆಳೆಯಬೇಕಿದೆ.

**ನಿರೂಪಣೆ: ರೂಪಾ ಕೆ.ಎಂ.**